# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ5004/2021** ಪ್ರಾ.ಸಾ-4

ಚಾಸಾ-4

ದಿನಾಂಕಃ09-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಅಂಬರೀಷ್ |
| ತಂದೆಯ ಹೆಸರು | ಚಿಕ್ಕ ಅಂಜಿನಪ್ಪ |
| ವಯಸ್ಸು | 30 |
| ಉದ್ಯೋಗ | ಗಾರ್ಮೆಂಟ್ಸ ನಲ್ಲಿ ಕೆಲಸ |
| ವಾಸಸ್ಥಳ | ಕಡಗತ್ತೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನನಗೆ ಚಾಸಾ-1 ರಿಂದ ಚಾಸಾ-3 ಗೊತ್ತು. ಹಿಂದೆ ನಂದಿನಿ ವೈನ್ಸ ಕೊಡಿಗೇನಹಳ್ಳಿಯಲ್ಲಿ ಸಹಾಯಕ ಕ್ಯಾಷೀಯರ್ ಆಗಿ ಕೆಲಸ ಮಾಡುತ್ತಿದ್ದೆ. ಚಾಸಾ-1 ಅಲ್ಲಿ ಕ್ಯಾಷೀಯರ್ ಆಗಿದ್ದ. ಚಾಸಾ-2 ಹೆಲ್ಪರ್ ಆಗಿದ್ದ. ಚಾಸಾ-3 ಕ್ಯಾಶೀಯರ್ ಆಗಿದ್ದ. ನಮ್ಮ ನಂದಿನಿ ವೈನ್ಸನ ಮಾಲೀಕರ ಹೆಸರು ವಿ.ಆನಂದ್.

ಅಂದಾಜು 2 ವರ್ಷಗಳ ಹಿಂದೆ ರಾತ್ರಿ 09ಃ00 ಗಂಟೆ ಸುಮಾರಿಗೆ ನಾನು ವೈನ್ಸ ಶಾಪ್ ನಲ್ಲಿ ಇದೆ. ನಾನು ವೈನ್ಸ ಶಾಪ್ ಒಳಗಡೆ ಲೆಕ್ಕ ಬರೆಯುತ್ತಿದ್ದೆ. ಆಗ ಶಬ್ದ ಬಂತು, ವೈನ್ಸ ಶಾಪ್‌ನ ಗೇಟ್ ಗೆ ಬೆಂಕಿ ಹತ್ತಿಕೊಂಡಿತು. ಫ್ರಿಡ್ಜಗೆ ಬೆಂಕಿ ಹತ್ತಿಕೊಂಡಿತು. ಚಾಸಾ-2 ರವರ ಮೈ ಮೇಲೆ ಬೆಂಕಿ ಹತ್ತಿಕೊಂಡಿತು. ನಾನು ಅವನನ್ನು

ಸರ್ಕಾರಿ ಆಸ್ಪತ್ರೆ ಕೊಡಿಗೇನಹಳ್ಳಿಗೆ ಕರೆದುಕೊಂಡು ಹೋದೆ. ಅಷ್ಟು ಬಿಟ್ಟರೆ ನನಗೆ ಏನು ವಿಚಾರ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ 3 ಮತ್ತು 4 ಮತ್ತು ವಿ.ಸಿ ಮೂಲಕ ನೋಡುತ್ತಿರುವ 1 ಮತ್ತು 2ನೇ ಆರೋಪಿಗಳನ್ನು ನಾನು ನೋಡಿಲ್ಲ. ಅವರು ಏನು ತಪ್ಪು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಪೊಲೀಸರು ನನ್ನಲ್ಲಿ ಅವರು ಹೇಳಿದಂತೆ ಹೇಳಿಕೆ ನೀಡಲು ಹೇಳಿದ್ದಾರೆ. ನಾನು ಸ್ವ-ಇಚ್ಚೆಯಿಂದ ಯಾವುದೇ ಹೇಳಿಕೆ ನೀಡಿಲ್ಲ. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡುವಾಗ ತೆಗೆದ ಫೋಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಒಂದು ಫೋಟೋ ವನ್ನು ನೀಡಿ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡುವಾಗ ತೆಗೆದಿದ್ದು ಎಂದು ಗುರುತಿಸಿದ ಕಾರಣ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಗೋಪಾಲನ ಮೈಎಲ್ಲಾ ಸುಟ್ಟು ಹೋಗಲು ಏನು ಮತ್ತು ಯಾರು ಕಾರಣ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ಹೇಳಿಕೆ ನೀಡುವ 6 ತಿಂಗಳ ಹಿಂದೆ ನಾನು ನಂದಿನಿ ವೈನ್ಸ ಶಾಪ್ ನಲ್ಲಿ ಕೆಲಸಕ್ಕೆ ಇದ್ದೆ ಎಂದರೆ ಸರಿ. ದಿನಾಂಕಃ24-09-2020 ರಂದು ಚಾಸಾ-1 ರಿಂದ ಚಾಸಾ-3 ಮತ್ತು ನಾನು ನಂದಿನಿ ವೈನ್ಸ ಶಾಪ್ ನಲ್ಲಿ ಇದ್ದೆವು ಎಂದರೆ ಸರಿ. ಆ ಸಮಯಕ್ಕೆ 3 ಜನ ಅಪರಿಚಿತರು ಬೈಕ್ ನಲ್ಲಿ ವೈನ್ಸ್ ಶಾಪ್ ಬಳಿ ಬಂದರು ಎಂದರೆ ಗೊತ್ತಿಲ್ಲ. ಅವರಲ್ಲಿ ಒಬ್ಬ ಬೈಕ್ ಅಲ್ಲಿ ಕುಳಿತಿದ್ಧ, ಇನ್ನೊಬ್ಬ ಪೆಟ್ರೋಲ್ ತುಂಬಿದ ಬಿಯರ್ ಬಾಟಲ್ ಹಿಡಿದಿದ್ದ, ಮತ್ತೊಬ್ಬ ಬೀಯರ್ ಬಾಟಲ್ ಗೆ ಬೆಂಕಿ ಹಚ್ಚಿ ನಾವು ಕೆಲಸ ಮಾಡುತ್ತಿದ್ದ ವೈನ್ಸ ಶಾಪ್ನ ಮೇಲೆ ಎಸೆದ ಎಂದರೆ ಗೊತ್ತಿಲ್ಲ. ಆಗ ನಾನು ಮತ್ತು ಚಾಸಾ-3 ಆ ಮೂರು ಜನರನ್ನು ಹಿಡಿದುಕೊಳ್ಳಲು ಹೋದೆವು ಎಂದರೆ ಸರಿಯಲ್ಲ. ಆಗ ಅವರು ಜೋರಾಗಿ ಬೈಕ್ ಓಡಿಸಿಕೊಂಡು ಕೊಡಿಗೇನಹಳ್ಳಿ ಕಡೆ ಹೋದರು ಎಂದರೆ ಗೊತ್ತಿಲ್ಲ.

ನಾವು ಗೋಣಿ ತಾಟು ಹಾಕಿ ಗೋಪಾಲನ ಮೈ ಮೇಲಿ ಬಿದ್ದ ಬೆಂಕಿಯನ್ನು ಆರಿಸಿದೆವು ಎಂದರೆ ಸರಿ. ಅಲ್ಲಿಂದ ಕೊಡಿಗೇನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ ಎಂದರೆ ಸರಿ. ಅಲ್ಲಿಂದ ಮತ್ತೆ ಚಾಸಾ-3 ಜೊತೆ ಮಧುಗಿರಿ ಆಸ್ಪತ್ರೆಗೆ ಕಳುಹಿಸಿದ್ದೆ ಎಂದರೆ ಸರಿ. ಗೋಪಾಲನ ಮೈ ಮೇಲೆ ಪೆಟ್ರೋಲ್ ಬಾಂಬ್ ಎಸೆದಿದ್ದರಿಂದ ಅವನ ಮೈ ಮೇಲೆ ಗಾಯಗಳು ಆಗಿದ್ದವು ಎಂದರೆ ಬೆಂಕಿ ತಗುಲಿ ಗಾಯಾ ಆಗಿದ್ದು ಗೊತ್ತು ಎಂದು ನುಡಿಯುತ್ತಾರೆ. ವೈನ್ಸ ಶಾಪ್ ನ ಕ್ಯಾಷ ಟೇಬಲ್ ಮತ್ತು air cooler ಸುಟ್ಟು ಹೋಗಿ 20 ಸಾವಿರ ನಷ್ಟ ಆಗಿದೆ ಎಂದರೆ ಹೌದು. ಗೋಪಾಲನನ್ನು ತುಮಕೂರು ಆಸ್ಪತ್ರೆ ಮತ್ತು ಬೆಂಗಳೂರಿನ ಕಣ್ವಾ ಸಾಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕ:28-09-2020 ರಂದು ಪೊಲೀಸರು ಇಬ್ಬರು ಜನ ಆಸಾಮಿಗಳನ್ನು ನಮ್ಮ ಅಂಗಡಿಯ ಬಳಿ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಾಗಿ ಗೊತ್ತಿಲ್ಲ. ಪೊಲೀಸರು ಇನ್ನೊಬ್ಬ ವ್ಯಕ್ತಿಯ ಫೋಟೋ ತೋರಿಸಿದರು ಎಂದರೆ ಗೊತ್ತಿಲ್ಲ. ಆ ಕರೆದುಕೊಂಡು ಬಂದ ಇಬ್ಬರು ವ್ಯಕ್ತಿಗಳು ಮತ್ತು ಫೋಟೋದಲ್ಲಿ ಇರುವ ವ್ಯಕ್ತಿ ಮೂರು ಜನ ಸೇರಿ ನಮ್ಮ ವೈನ್ಸ ಶಾಪ್ ನ ಮೇಲೆ ಪೆಟ್ರೋಲ್ ಬಾಂಬ್ ಎಸೆದಿದ್ದು ಎಂದು ನಾನು ಅವರನ್ನು ಪೊಲೀಸರ ಮುಂದೆ ಗುರುತಿಸಿದ್ದು ಎಂದರೆ ಸರಿಯಲ್ಲ. ಅವರು ಹೆಸರು ವಿಕಾಸ್ ಅಲಿಯಾಸ್ ವಿಕ್ಕಿ, ಮಧುಸೂಧನ ಮತ್ತು ಮನೋಜ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. 1 ನೇ ಆರೋಪಿ ನಮ್ಮ ಮಾಲೀಕರಲ್ಲಿ ಹಣ ಮತ್ತು ಮದ್ಯಕ್ಕೆ ಭೇಡಿಕೆ ಇಟ್ಟಿದ್ದ ಕೊಡದೆ ಇದ್ದಾಗ ಆರೋಪಿ 2 ರಿಂದ 4 ರವರ ಮೂಲಕ ನಮ್ಮ ಅಂಗಡಿಗೆ ಪೆಟ್ರೋಲ್ ಬಾಂಬ್ ಎಸೆದಿದ್ದ ಎಂಬ ವಿಚಾರ ನನಗೆ ಮತ್ತೆ ಗೊತ್ತಾಯಿತು ಎಂದರೆ ಸರಿಯಲ್ಲ. ನಾನು ಆರೋಪಿ 2 ರಿಂದ 4 ಪೆಟ್ರೋಲ್ ಬಾಂಬ್ ಎಸೆದಿದ್ದದನ್ನು ಕಣ್ಣಾರೆ ನೋಡಿದ್ದರೂ ಶಾಟ್ ಸರ್ಕೂಟ್ ನಿಂದ ಬೆಂಕಿ ತಗುಲಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಟ್ ಸರ್ಕೂಟ್ ನಿಂದ ಬೆಂಕಿ ತಗುಲಿದೆ ಎಂದು ನ್ಯಾಯಾಲಯದ ಮುಂದೆ ಕಟ್ಟು ಕಥೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ:29-09-2020 ರಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿ ಘಟನೆಯನ್ನು ಕಣ್ಣಾರೆ

ನೋಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕ:29-09-2020 ರ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿಗಳಿಗೆ ಹೆದರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ.LRR ವಕೀಲರಿಂದ 1 ನೇ ಆರೋಪಿ ಪರವಾಗಿ:-**

ನಾನು ಈಗ ನಂದಿನಿ ವೈನ್ಸ ನಲ್ಲಿ ಕೆಲಸ ಮಾಡುತ್ತಿಲ್ಲ. 2019 ನೇ ಇಸವಿಯ ಕೊನೆಯ ತಿಂಗಳಲ್ಲಿ ನಾನು ಕೆಲಸಕ್ಕೆ ಸೇರಿದ್ದು. ನಮ್ಮ ವೈನ್ಸ ಶಾಪ್ ನಲ್ಲಿ ಕೆಲಸಕ್ಕೆ ಬರುವವರ ಬಗ್ಗೆ ಹಾಜರಾಗಿ ಪುಸ್ತಕ ಇಲ್ಲ. ಪ್ರತಿ ನಿತ್ಯ ಯಾವ ಸಿಬ್ಬಂದಿ ಕೆಲಸಕ್ಕೆ ಬರುತ್ತಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ಗೋಪಾಲನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ವಾಹನದ ಸಂಖ್ಯೆ ಗೊತ್ತಿಲ್ಲ. ನನ್ನ ಜೊತೆ ಬೇರೆ ಯಾರು ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ನಿಪಿ-7 ಫೋಟೋ ಯಾರು ತೆಗೆದಿದ್ದು, ಯಾವ ದಿನಾಂಕ ತೆಗೆದಿದ್ದು ಎಂದು ಹೇಳಲು ಆಗುವುದಿಲ್ಲ. ಈ ಪ್ರಕರಣಕ್ಕೆ ಸಂಬಂದಪಟ್ಟ ಹಾಗೆ ಪೊಲೀಸ ಠಾಣೆಗೆ ನಾನು ಯಾವ ಯಾವ ದಿನ ಹೋಗಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನಮ್ಮ ವೈನ್ಸ ಶಾಪ್ ಗೆ ಬರುವ ನಿತ್ಯ ಗಿರಾಕಿಗಳ ಹೆಸರು ನೆನಪಿಲ್ಲ, ಅವರನ್ನು ಗುರುತಿಸಲು ಆಗುವುದಿಲ್ಲ. ವೈನ್ಸ ಶಾಪ್ ಗೆ ಪೊಲೀಸರು ಬರುತ್ತಾರೆ. ಅವರು ನಮ್ಮ ಮಾಲೀಕರ ಜೊತೆ ಅನ್ಯೂನ್ಯವಾಗಿದ್ದಾರೆ ಎಂದರೆ ಸರಿ.

**ಪಾಟೀಸವಾಲು ಶ್ರೀ.PNR ವಕೀಲರಿಂದ 3 ನೇ ಆರೋಪಿ ಪರವಾಗಿ:-**

1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಬೇಕಾಗಿ ಕೋರಿಕೊಂಡಿರುತ್ತಾರೆ, ಅಳವಡಿಸಿಕೊಳ್ಳಲಾಯಿತು.

**ಪಾಟೀಸವಾಲು ಶ್ರೀ.RH ವಕೀಲರಿಂದ 4 ನೇ ಆರೋಪಿ ಪರವಾಗಿ:-**

1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಬೇಕಾಗಿ ಕೋರಿಕೊಂಡಿರುತ್ತಾರೆ, ಅಳವಡಿಸಿಕೊಳ್ಳಲಾಯಿತು.

ಆರೋಪಿ 2 ನೇ ಪರ ವಕೀಲರು ಗೈರು ಹಾಜರಾಗಿದ್ದು ಆರೋಪಿಗಳಿಗೆ ಪಾಟೀಸವಾಲು ಮಾಡಲು ಹೇಳಿದಾಗ ಪಾಟೀಸವಾಲು ಮಾಡಿರುವುದಿಲ್ಲ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಒ ತಿ ಹೇ ಸ ಇದೆ.

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು-ಮಧುಗಿರಿ.